**ಹೆಚ್ಚುವರಿ ದೀವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಖಾನಾಪೂರ**

**ಸಿ.ಸಿ.ನಂ.658/2011**

**ಪಿಡಬ್ಲು 11**

**ಸಿಡಬ್ಲು 11**

ಹೆಸರು : ಆನಂದ ಮಹಾವೀರ ಒನಕುದ್ರೆ

ವಯಸ್ಸು : 38 ವರ್ಷ

ಉದ್ಯೋಗ : ಸಿ.ಪಿ. ಐ

ವಾಸ : ವಿದ್ಯಾನಗರ ಹುಬ್ಬಳ್ಳಿ

ದಿನಾಂಕ 16-03-2020 ರಂದು ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಎಪಿಪಿ ಅವರಿಂದ.

ನಾನು ದಿನಾಂಕ 11-08-2009 ರಿಂದ 24-09-2011 ರ ವರೆಗೆ ನಂದಗಡ ಪೋಲಿಸ ಠಾಣೆಯಲ್ಲಿ ಪಿ.ಎಸ.ಐ ಆಗಿ ಕೆಲಸ ಮಾಡಿದ್ದೇನೆ.

ದಿನಾಕ 09.02.2011 ರಂದು ಸಂಜೆ 6.30 ಗಂಟೆಗೆ ಚಾಸಾ 1 ರವರು ಠಾಣೆಗೆ ಹಾಜರಾಗಿ ಲಿಖಿತ ದೂರನ್ನು ಕೊಟ್ಟಿದ್ದು ಅದನ್ನು ಸ್ವೀಕರಿಸಿ ನಮ್ಮ ಠಾಣಾ ಗುನ್ನಾ ಸಂಖ್ಯೆ 29/11 ರಲ್ಲಿ ದಾಖಲಿಸಿ ಪ್ರ.ವ ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟೆ. ಸಾಕ್ಷಿಯು ನಿಪಿ-1 ರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರ.ವ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-16 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-16(ಎ) ಎಂದು ಗುರುತಿಸಲಾಯಿತು.

ಅದೇ ದಿನ ಚಾಸಾ 1 ರವರು ದಾಖಲೆಗಳನ್ನು ಹಾಜರು ಪಡಿಸಿದ್ದು, ಅವುಗಳನ್ನು ನಿಪಿ-4 ರಂತೆ ಪಂಚನಾಮೆ ಮಾಡಿ ಆ ದಾಖಲೆಗಳನ್ನು ಜಪ್ತು ಪಡಿಸಿಕೊಂಡೆ. ನಿ.ಪಿ-4 ರಲ್ಲಿರುವ ಸಹಿಯನ್ನು ನಿ.ಪಿ-4 ಸಿ ಎಂದು ಗುರುತಿಸಲಾಯಿತು.

ಅವುಗಳನ್ನು ಈ ಕೆಳಕಂಡಿಂತಿವೆ

ಆರೋಪಿಯ ನೇಮಕಾತಿ ಆದೇಶವನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-15 ಎಂದು ಗುರುತಿಸಲಾಗಿದೆ.

ಅಂಚೆ ನಿರೀಕ್ಷಕರು ಬೆಳಗಾವಿಯ ರವರ ಜರುಗಿಸಿದ ಪಂಚನಾಮೆ ದಿ.10.04.2006 ಅದನ್ನು ನಿ.ಪಿ-5 ಎಂದು ಗುರುತಿಸಲಾಗಿದೆ ಸಾಕ್ಷಿಯ ಸಹಿಯನು ನಿ.ಪಿ-5 ಇ ಎಂದು ಗುರುತಿಸಲಾಯಿತು.

ಚಾಪಗಾಂವ ಬ್ರಾಂಚ್ ಬಿ.ಒ ಚೀಟಿಗಳನ್ನು ನೋಡಿ ಗುರುತಿಸಿದ್ದು, ಈಗಾಗಲೇ ನಿಪಿ-8 ರಿಂದ 12 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನು ನಿ.ಪಿ-8 ಎ ರಿಂದ 12 ಎ ಎಂದು ಗುರುತಿಸಲಾಯಿತು.

ಚಾಪಗಾಂವ ಬ್ರಾಂಚ್ ಪೋಸ್ ಆಪೀಸ್ ಲೆಕ್ಕ ಪತ್ರ ದಿ.01.08.2005 ಮತ್ತು ದಿ.11.04.2006 ಗಳನ್ನು ನೋಡಿ ಗುರುತಿಸಿದ್ದು, ಈಗಾಗಲೇ ನಿಪಿ-7 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನು ನಿ.ಪಿ-7 ಎ ಎಂದು ಗುರುತಿಸಲಾಯಿತು.

ಆರೋಪಿತನು ಅಂಚೆ ನಿರೀಕ್ಷಕರು ಬೆಳಗಾವಿ ರವರ ಬಳಿ ನೀಡಿದ ಲಿಖಿತ ಹೇಳಿಕೆ ದಿ.10.04.2006 ಈಗಾಗಲೇ ನಿಪಿ-6 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನು ನಿ.ಪಿ-6 ಡಿ ಎಂದು ಗುರುತಿಸಲಾಯಿತು.

ಆರೋಪಿತನಿಂದ ಹಣ ವಸೂಲಿ ಮಾಡಿಕೊಂಡ ಬಗ್ಗೆ ಕಾಪಿ ಒಂದು ಈಗಾಗಲೇ ನಿಪಿ-14 14 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನು ನಿ.ಪಿ-14 ಎ ಎಂದು ಗುರುತಿಸಲಾಯಿತು.

ದಿನಾಂಕ 11.02.2011 ರಂದು ಗುನ್ನಾ ಸ್ಥಳಕ್ಕೆ ಭೇಟಿ ನೀಡಿ ಚಾ.ಸಾ-1 ರವರ ತೋರಸಿರುವ ಸ್ಥಳದಲ್ಲಿ ಚಾ.ಸಾ-2 ಮತ್ತು ಚಾ.ಸಾ-3 ರವರ ಸಮಕ್ಷಮ ನಿ.ಪಿ-3 ರಂತೆ ಪಂಚನಾಮೆ ಜರುಗಿಸಿರುತ್ತೇನೆ. ಸಾಕ್ಷಿಯ ಸಹಿಯನ್ನು ನಿ.ಪಿ-3 ಎ ಎಂದು ಗುರುತಿಸಲಾಯಿತು. ನಿ.ಪಿ-7 ರಲ್ಲಿರುವ ಸಂಬಂಧಿಸಿದ ಭಾಗವನ್ನು ನಿ.ಪಿ7 ಬಿ ಎಂದು ಗುರುತಿಸಲಾಗಿದೆ.ಅದೇ ದಿನ ಚಾ.ಸಾರ-1 ರವರ ಮರು ಹೇಳಿಕೆ ಮತ್ತು ಚಾ.ಸಾ-8 ರವರ ಹೇಳಿಕೆಯನ್ನು ಪಡೆಯಲಾಯಿತು. 13.02.2011 ರಂದು ಚಾ.ಸಾ-9 ರವರ ಹೇಳಿಕೆಯನ್ನು, ದಿ.04.05.2011 ಚಾ.ಸಾ-6 ರವರ ಹೇಳಿಕೆಯನ್ನುದ ದಿ.09.05.2011 ರಂ ದು ಚಾ.ಸಾ-7 ರವರ ಹೇಳಿಕೆಯನ್ನು ಪಡೆಯಲಾಯಿತು. ಆರೋಪಿಯು ನಿ.10.04.2006 ರಂದು ಕಛೇರಿಯಲ್ಲಿ ಇರಬೇಕಾದ ಉಳಿಕೆ ಹಣವನ್ನು 8,462.75 ನೇದ್ದವುಗಳನುಕ್ಕಿ ತನ್ನ ಸ್ವಂತಕ್ಕೆ ದುರುಪಯೋಗಪಡಿಸಿಕೊಂಡು, ತನ್ನ ಸ್ವಂತಕ್ಕೆ ಬಳಸಿಕೊಂಡು ಅಪರಾಧ ಮಾಡಿದ್ದು ತನಿಖೆಯಲ್ಲಿ

ಸಾಬೀತಾದ ಕಾರಣ ಈ ಪ್ರಕರಣದಲ್ಲಿ ಈ ಅವಧಿಯ ಅಪರಾಧಕ್ಕೆ ದೋಷಾರೋಪಣ ಪತ್ರ ಸಲ್ಲಿಸಿದ್ದೇನೆ. ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು ಆರೋಪಿ ಪರ ವಕೀಲ ರರಿಂದ**

ನಮ್ಮನ್ನು ಹೋರತು ಪಡಿಸಿ ಬೇರೆ ವಿಭಾಗದವರಿಗೆ ತನಿಖೆಮಾಡಲು ಅವಕಾಶ ಇಲ್ಲ ಎಂದರೆ ಸರಿ. ಪ್ರಕರಣವನ್ನು ತನಿಖೆಯನ್ನು ಕೈಗೆತ್ತಿಕೊಂಡಾಗಿನಿಂದ ಪಂಚನಾಮೆ ಮಾಡುವ ತನಕ ಅಂಚೆ ಕಛೇರಿಗೆ ಬೇಟಿ ಕೊಟ್ಟಿಲ್ಲ. ಚಾಸಾ.1 ರವರು ನೀಡಿದ ದಾಖಲಾತೆಗಳನ್ನು ಸಂಪೂರ್ಣವಾಗಿ ಪರೀಶೀಲಿಸಿದ್ದೇನೆಂದರೆ ಸರಿ. ಆರ್.ಡಿ ಬುಕ್‌ಗೆ ಸಂಬಂದಿಸಿದಂತೆ ಸಾಕ್ಷಿದಾರನನ್ನು ರವರನ್ನು ತನಿಖೆಮಾಡಿಲ್ಲ ಎಂದರೆ ಸರಿಯಲ್ಲ. ಪಂಚ ಸಾಕ್ಷಿದಾರರು ಖಾಯಂ ಪಂಚರೆಂದರೆ ಸರಿಯಲ್ಲ. ನಿಪಿ. ಜಪ್ತು ಪಂಚನಾಮೆನ್ನು ಮುಲ್ಲಾ ಎಂಬುವರು ಬರೆದಿರುತ್ತಾರೆ. ಬರೆದವರ ಸಹಿ ಇಲ್ಲ ಎಂದರೆ ಸರಿ. ಆರ್.ಡಿ ಬುಕ್‌ಗಳು ಹಣ ತುಂಬುವರು ಬಳಿ ಇರುತ್ತವೆ ಎಂದರೆ ಸರಿ. ಖಾತೆದಾರರು ಹಣ ತುಂಬಿದ ನಂತರ ಸದರಿ ಆರ್.ಡಿ ಬುಕ್‌ಗಳಲ್ಲಿ ನಮೂದು ಮಾಡಿ ಅದಕ್ಕೆ ಸೀಲ್ ಮತ್ತು ಸಹಿ ಹಾಕುತ್ತಾರೆ ಎಂದರೆ ಸರಿ. ಆರ್.ಡಿ ಬುಕ್‌ಗಳಲ್ಲಿ ವಿವಿಧ ಅಕ್ಷರಗಳಲ್ಲಿ ನಮೂದಿದೆ ಎಂದರೆ ಸರಿಯಲ್ಲ. ಸದರಿ ಪುಸ್ತಕದಲ್ಲಿ ಹಣ ಸ್ವೀಕೃತಿ ಬಗ್ಗೆ ಸೀಲ್ ಮತ್ತು ಸಹಿ ಇಲ್ಲ ಎಂದರೆ ಸರಿಯಲ್ಲ. ಆರ್.ಡಿ ಬುಕ್‌ಗಳಲ್ಲಿ ಇರುವ ಹಸ್ತಾಕ್ಷರುವು ಆರೋಪಿದೆ ಎಂದು ಹೇಳಲು ನಾನು ಯಾವುದೇ ತಜ್ಞರ ವರದಿಯನ್ನು ಪಡೆದಿಲ್ಲ. ಸದಡಿ ಪುಸ್ತಕದಲ್ಲಿ ಬರೆದ ಬರವಣೆಗಳು ಬೇರೆ ಬೇರೆ ಆಗಿದ್ದರಿಂದ ಅವುಗಳನ್ನು ಆರೋಪಿ ಹೊರತು ಪಡಿಸಿ ಹೂಡಿಕೆದಾರರೇ ನಮೂದು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿದಾರ ಹೇಳಿಕೆಯ ಮೇರೆಗೆ ಆರೋಪಿಯ ಹಸ್ತಾಕ್ಷರ ಎಂದು ಹೇಳಿದ್ದೇನೆಂದರೆ ಸರಿ. ಅಂಚೆ ಕಛೇರಿಯನು ನೀಡಿದ 15 ದಾಖಲುಗಳನ್ನು ಸ್ವೀಕತಿಸಿ ಯಾವುದೇ ತನಿಖೆಯನ್ನು ಮಾಡದೆ ಹಾಗೂ ಆ 15 ದಾಖಲೆಗಳು ಸತ್ಯವೋ ಇಲ್ಲವೋ ಎಂದು ಪರೀಶೀಲಸದೆ ಆರೋಪಿಯ ವಿರುದ್ಧ ದೋಷಾರೋಣೆ ಪಟ್ಟಿ ಸಲ್ಲಿಸಿದ್ದೆನೆಂದರೆ ಸರಿಯಲ್ಲ. ಹೂಡಿಕೆದಾದರು ಹಣವನ್ನು ತುಂಬಿದ ಪಕ್ಷದಲ್ಲಿ ಅದನ್ನು ನಮೂದಿಸಿ ಸೀಲ್ ಹಾಕಿ ಆರೋಪಿಯೂ ಸಹಿ ಮಾಡಬೇಕಾಗುತ್ತದೆ ಎಂದರೆ ಸರಿ. ಹೂಡಿಕೆದಾರರು ಯಾವುದೇ ಹಣ ತುಂಬದ ಕಾರಣ ಆರ್.ಡಿ ಬುಕ್ ಗಳಲ್ಲಿ ಆ ಬಗ್ಗೆ ಪುಸ್ತಕದಲ್ಲಿ ಯಾವುದೇ ನಮೂದು ಇಲ್ಲ ಎಂದರೆ ಸರಿಯಲ್ಲ. ಆರೋಪಿಯ ತಪ್ಪಿ ಲ್ಲ ಎಂದು ಗೊತ್ತಿದ್ದರು ಸಹ ಸಾಕ್ಷಿದಾರರ ಹೇಳಿಕೆಗಳನ್ನು ಪ್ರಕರಣಕ್ಕೆ ಸೃಷ್ಟಿಸಿದೆನೆಂದರೆ ಸರಿಯಲ್ಲ. ಆರ್.ಡಿ ಬುಕ್‌ಗಳಲ್ಲಿ ನಮೂದಿಸುವಲ್ಲಿ ಆರೋಪಿಯೂ ಯಾವುದೇ ತಪ್ಪು ಮಾಡಿಲ್ಲ, ಹಣ ದುರುಪಯೋಗ ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಉದ್ದೇಶ ಪೂರಕವಾಗಿ ಆರೋಪಿಯ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದೆನೆಂದರೆ ಸರಿಯಲ್ಲ. ತಜ್ಞರ ಅಭಿಪ್ರಾಯಾವನ್ನು ಪಡೆದರೆ ಆರೋಪಿಯ ತಪ್ಪಿ ಲ್ಲ ಎಂದು ಗೊತ್ತಾಗುತ್ತದೆ ಎಂದು ಅವರ ಕೇಳದೆ ದೋಷಾರೋಪಣ ಪತ್ರವನ್ನು ಸಲ್ಲಿಸಿದ್ದೆನೆಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇ ರೆಗೆ ಬೆರಳಚ್ಚು ಮಾಡಲಾಗಿದೆ)

ಓ .ಹೇ .ಕೇ .ಸರಿ ಇದೆ .

ಹೆಚ್ಚುವರಿ ಸಿವಿಲ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ
ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.